ಈ) ಸನ್ನಿಪಳ್ಳಿ ಕೆರೆಯ ಕಾಮಗಾರಿಯನ್ನು ತುಮಕೂರು ಜಿಲ್ಲಾ ಪರಿಷತ್ತಿನ ೧೯೯೨-೯೩ನೇ ಸಾಲಿನ ಸಣ್ಣ ನೀರಾವರಿ ಕರಡು ಆಯವ್ಯಯ ಪಟ್ಟಿಯ ಅನುಬಂಧ 'ಇ' ನಲ್ಲಿ ಸೇರಿಸಲಾಗಿದೆ. ಇದಕ್ಕೆ ಅನುಮೋದನೆ ದೊರೆತರೆ ಈ ಕೆರೆಯ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು. ಹಾಗೂ ತದನಂತರ ಮೂರು ವರ್ಷಗಳಲ್ಲಿ ಪೂರ್ಣಗೊಳಿಸಲಾಗುವುದು.

ಮೈಸೂರಿನಲ್ಲಿ ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯನ್ನು ಸ್ಥಾಪಿಸಲು ಸರ್ಕಾರದ ಹಣ

೧೪೨೩. (೨೧೫೨) ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಾ):- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಹಾಗೂ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಮೈಸೂರಿನಲ್ಲಿ ರಾಜ್ಯ ಗ್ರಾಮೀಣ ಸಂಸ್ಥೆಯನ್ನು ಸ್ಥಾಪಿಸಲು ಸರ್ಕಾರವು ಹಣ ವೆಚ್ಚ ಮಾಡಿದೆಯೇ?

ಆ) ಹೌದಾದಲ್ಲಿ ಈವರೆಗೆ ವೆಚ್ಚಮಾಡಿರುವ ಮೊಬಲಗು ಎಷ್ಟು?

ಇ) ಸಿಬ್ಬಂದಿ ವ್ಯವಸ್ಥೆ ಏನು?

ಈ) ನಿರ್ದೇಶಕರು ಸೇರಿದಂತೆ ಪೂರ್ಣಾವಧಿ ಸಿಬ್ಬಂದಿಯವರು ಇದ್ದಾರೆಯೇ?

ಉ) ಹೌದಾದಲ್ಲಿ ಸಿಬ್ಬಂದಿ ಮೇಲಿನ ವಾರ್ಷಿಕ ವೆಚ್ಚ ಎಷ್ಟು?

ಊ) ಅನುಷ್ಠಾನಕ್ಕೆ ತರಲಾದ ಕಾರ್ಯಕ್ರಮಗಳ ಸಂಖ್ಯೆ ಎಷ್ಟು?

ಎ) ಕಾರ್ಯಕ್ರಮಗಳ ಮೇಲಿನ ವೆಚ್ಚ ಎಷ್ಟು?

ಐ) ಕ್ಷೇತ್ರ ತರಬೇತಿ ಹೊಂದಿದ ಸಿಬ್ಬಂದಿಯ ಸಂಖ್ಯೆ ಎಷ್ಟು?

ಒ) ಈ ಸಂಸ್ಥೆಯನ್ನು ಈ ಹಿಂದಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಸಚಿವರಾಗಿದ್ದ ಶ್ರೀ ಅಬ್ದುಲ್ ನಜೀರ್‌ಸಾಬ್‌ರವರ ಹೆಸರನ್ನು ಇಡಲಾಗುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಹಾಗೂ ಕಂದಾಯ ಸಚಿವರು):-

ಅ ಮತ್ತು ಆ) ಯೂರೋಪಿಯನ್ ಆರ್ಥಿಕ ಸಮುದಾಯದ ನೆರವಿನಿಂದ ಭಾರತ ಸರ್ಕಾರವು ಕಟ್ಟಡಕ್ಕೆ ರೂ. ೫೫ ಲಕ್ಷ ಹಾಗೂ ಉಪಕರಣಗಳ ಖರೀದಿಗೆ ರೂ. ೨೦ ಲಕ್ಷ ಬಿಡುಗಡೆಮಾಡಿದೆ. ಬಿಡುಗಡೆಯಾದ ಈ ಎಲ್ಲಾ ಹಣವನ್ನು ವೆಚ್ಚಮಾಡಲಾಗಿದೆ.

ಇ) ಸಿಬ್ಬಂದಿ ವ್ಯವಸ್ಥೆ ಈ ಕೆಳಕಂಡಂತಿದೆ

೧)	ನಿರ್ದೇಶಕರು	೧
೨)	ಬೋಧಕರು	೩
೩)	ಅಪರನಿರ್ದೇಶಕರು	೧
೪)	ಅಧೀಕ್ಷಕರು	೧
೫)	ಕ್ಷೇಮ ಪಾಲಕರು	೧

೬)	ಶೀಘ್ರಲಿಪಿಗಾರರು	೨
೭)	ಪ್ರಥಮದರ್ಜೆ ಸಹಾಯಕರು	೧
೮)	ಸಿನಿಚಾಲಕರು	೧
೯)	ಟೆಲಿಫೋನ್ ಚಾಲಕರು	೧
೧೦)	ಬೆರಳಚ್ಚುಗಾರರು	೧
೧೧)	ದ್ವಿತೀಯ ದರ್ಜೆ ಸಹಾಯಕರು	೨
೧೨)	ವಾಹನಚಾಲಕರು	೧
೧೩)	ಅಡಿಗೆಯವರು	೨
೧೪)	ಅಡಿಗೆ ಸಹಾಯಕರು	೨
೧೫)	'ಡಿ' ವರ್ಗದ ನೌಕರರು	೧೨
	ಒಟ್ಟು	೩೮

ಈ) ಮೈಸೂರು ಆಡಳಿತ ತರಬೇತಿ ಸಂಸ್ಥೆಯ ಮಹಾ ನಿರ್ದೇಶಕರನ್ನು ಈ ಸಂಸ್ಥೆಗೆ ನಿರ್ದೇಶಕರೆಂದು ಘೋಷಿಸಲಾಗಿದೆ. ಈಗ ೭ ಮಂದಿ ಪೂರ್ಣಾವಧಿ ಪೂರಕ ಸಿಬ್ಬಂದಿಯವರು ಇತರ ಇಲಾಖೆಗಳಿಂದ ಪ್ರತಿನಿಯೋಜನೆ ಮೇಲೆ ಬಂದಿರುತ್ತಾರೆ. ಸೂಕ್ತ ಬೋಧಕವರ್ಗದವರನ್ನು ಗುರುತಿಸಿ ನೇಮಕಾತಿ ಮಾಡಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗಿದೆ.

ಉ) ೧೯೯೧-೯೨ನೇ ಸಾಲಿನಲ್ಲಿ ಸಿಬ್ಬಂದಿಯ ವೇತನ ಹಾಗೂ ಇತರ ಆವರ್ತಕ ವೆಚ್ಚಗಳಿಗಾಗಿ ಈವರೆಗೆ ರೂ. ೮,೩೧,೪೫೭-೦೦ನ್ನು ವೆಚ್ಚಮಾಡಲಾಗಿದೆ. ಹಾಗೂ ಇದರಲ್ಲಿ ಶತಾಂಶ ೫೦ರಷ್ಟನ್ನು ಭಾರತ ಸರ್ಕಾರವು ಮರುಪಾವತಿ ಮಾಡುವುದು.

ಊ) ೧೯೯೧-೯೨ಕ್ಕೆ ಇದ್ದಂತ ೨೭ ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗಿದೆ.

ಎ) ರೂ. ೨,೧೨,೫೧೦-೦೦

ಐ) ಸದರಿ ಸಂಸ್ಥೆಯಲ್ಲಿ ಎ ಮತ್ತು ಬಿ ವರ್ಗದ ಅಧಿಕಾರಿಗಳು, ಜಿಲ್ಲಾಪರಿಷತ್‌ನ ಚುನಾಯಿತ ಪ್ರತಿನಿಧಿಗಳು ಹಾಗೂ ಮಂಡಲ ಪಂಚಾಯಿತಿಗಳ ಪ್ರಧಾನರು ಮತ್ತು ಉಪ ಪ್ರಧಾನರುಗಳಿಗೆ ತರಬೇತಿಯನ್ನು ನೀಡಲಾಗುವುದು. ೧೯೯೧-೯೨ರಲ್ಲಿ ಈವರೆಗೆ ೪೭೯ ಮಂದಿ ಅಧಿಕಾರಿಗಳು ಹಾಗೂ ೩೨ ಮಂದಿ ಚುನಾಯಿತ ಪ್ರತಿನಿಧಿಗಳನ್ನು ೧೯೯೧-೯೨ರವರೆಗೆ ತರಬೇತುಗೊಳಿಸಲಾಗಿದೆ.

ಒ) ಈ ಸಂಸ್ಥೆಯನ್ನು ಈ ಹಿಂದಿನ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಸಚಿವರಾಗಿದ್ದ ದಿವಂಗತ ಶ್ರೀ ಅಬ್ದುಲ್ ನಜೀರ್‌ಸಾಬ್‌ರವರ ಸ್ಮರಣಾರ್ಥ ಅಬ್ದುಲ್‌ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ ಎಂದು ನಾಮಕರಣ ಮಾಡಲಾಗಿದೆ.

೧೯೯೨ರ ಒಲಂಪಿಕ್ಸ್‌ನಲ್ಲಿ ಭಾಗವಹಿಸುವ ಕ್ರೀಡಾ ಪಟುಗಳಿಗೆ ತರಬೇತಿ

೧೪೨೪ (೨೧೫೬) ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಿ):- ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?